MVC NO. 1175/2024

PW-2.

Dated: 14-01-2026

ಸಾಕ್ಷಿಯನ್ನು ಈ ದಿನ ದಿನಾಂಕ 14-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ಮುಖ್ಯ ವಿಚಾರಣೆಃ ಅರ್ಜಿದಾರನ ಪರವಾಗಿ ಶ್ರೀ ಐ ಡಿ ಡಬ್ಲೂ ವಕೀಲರಿಂದಃ

ಸಾಕ್ಷಿದಾರರು ತಾವು ನೀಡಿದ ಅಂಗ ನ್ಯೂನತೆ ಪ್ರಮಾಣ ಪತ್ರವನ್ನು ನಿಪಿ - 11 ಅಂತಾ ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಸಹಿ ನಿಪಿ-11 (ಎ) ಅಂತಾ ಗುರುತಿಸಲಾಯಿತು

ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಪಿ ವಿಎಮ್ ವಕೀಲರಿಂದಃ.

ನಾನು ಅರ್ಜಿದಾರನಿಗೆ ಚಿಕಿತ್ಸೆ ನೀಡಿದ ವೈದ್ಯರು ಇರುತ್ತೇನೆ ಎಂದರೆ ಸರಿ. ಸದರಿ ಅರ್ಜಿದಾರನಿಗೆ ನನ್ನ ಸ್ವಂತ ಆಸ್ಪತ್ರೆ ಯಲ್ಲಿ ಚಿಕಿತ್ಸೆ ನಿಡೀದ್ದೇನೆ ಎಂದರೆ ಸರಿ. ನಾನು ಅರ್ಜಿದಾರನಿಗೆ ಶಸ್ತ್ರ ಕ್ರಿಯೆಗೆ ಒಳಪಡಿಸಿರುತ್ತೇನೆ. ಅರ್ಜಿದಾರನಿಗೆ ಆದ 2 ಮೂಳೆ ಮುರಿತ ಗಾಯಕ್ಕೆ ಶಸ್ತ್ರ ಕ್ರಿಯೆ ಮಾಡಿರುತ್ತೇನೆ. ಸದರಿ ಅರ್ಜಿದಾರನಿಗೆ ಆದ ಮೂಳೆ ಮುರಿತ ಗಾಯಗಳು ಸಾದಾ ಸ್ವರೂಪದ ಮೂಳೆ ಮೂರಿತ ಇರುತ್ತವೆ ಎಂದರೆ ಸರಿಯಲ್ಲ. ಅಳವಡಿಸಿದ ಇನಪ್ಲೆಟ ಅರ್ಜಿದಾರನಿಗೆ ತೊಂದರೆ ಆದರೆ ಮಾತ್ರ ತೆರೆವುಗೊಳಿಸಲಾಗುತ್ತದೆ. ಅರ್ಜಿದಾರನಿಗೆ

MVC NO. 1175/2024

PW-2.

Dated: 14-01-2026

ಆದ 2 ಮೂಳೆ ಮುರಿತ ಗಾಯ ಸಂಪೂರ್ಣವಾಗಿ ಹೀಲ ಆಗಿರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಆದ ಬೆನ್ನು ಮೂಳೆ ಮುರಿತ ಗಾಯಗಳಿಗೆ ಯಾವುದೇ ಅಂಗ ನ್ಯೂನತೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಆದ ಮೂಳೆ ಮುರಿತ ಗಾಯದಿಂದ ಆತನ ದಿನನಿತ್ಯದ ಕ್ರಿಯೆಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಅಂಗ ನ್ಯೂನತೆ ಅಪರಲಿಂಬ ಮತ್ತು ಸ್ಪೈನ ಸೇರಿಸಿ ಹೊಲಬಾಡಿ ಶೇ 10% ಅಂತಾ ಮತ್ತು ಲೆಪ್ಟ ಅಪರಲಿಂಬ ಶೇ 25% ಅಂತಾ ಕೊಟ್ಟಿರುತ್ತೇನೆ. ನಾನು ಲೆಪ್ಟ ಅಪರಲಿಂಬ ಶೇ 25% ಅಂತಾ ಅತೀ ಹೆಚ್ಚಾಗಿ ಅಂಗ ನೂನ್ಯತೆ ಹೆಚ್ಚಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಶೇ 10% ಹೊಲಬಾಡಿ ಅಂತಾ ಅಂಗ ನ್ಯೂನತೆ ಇಲ್ಲದೇ ಇದ್ದರೂ ಸಹ ಸುಳ್ಳು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಶೇ 10% ಹೊಲಬಾಡಿ ಮತ್ತು ಶೇ 25% ಅಪರಲಿಂಬ ಸೇರಿ ಹೊಲಬಾಡಿ ಕೊಡಬಹುದಾ ಎಂದರೆ ¼ ನಲ್ಲಿ 1/3 ಅಂತಾ 16%ಅಂತಾ ಹೊಲಬಾಡಿ ಕೊಡಬಹುದು ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಗಣಕೀಕೃತ ಗೊಳಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,

ಬೈಲಹೊಂಗಲ.